ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 11/9/2020

# ವೈದ್ಯಕೀಯ ಪರೀಕ್ಷೆ: ಸಂಜನಾ ಹೈಡ್ರಾಮಾ

## ರಾಗಿಣಿ ಸೇರಿ ಐವರಿಗೆ ಟೆಸ್ಟ್ ■ ಡ್ರಗ್ಸ್ ಸೇವನೆ ಖಾತ್ರಿಗೆ ರಕ್ತ, ಮೂತ್ರ, ಕೂದಲು ಪಡೆದ ವೈದ್ಯರು

ಬೆಂಗಳೂರು: ಸ್ಯಾಂಡಲ್‌ವುಡ್ ಡ್ರಗ್ಸ್ ಪ್ರಕರಣದ ಆರೋಪಿಗಳಾದ ನಟಿ ರಾಗಿಣಿ, ಸಂಜನಾ ಗಲ್ರಾನಿ ಸೇರಿ ಐವರು ಆರೋಪಿಗಳನ್ನು ಗುರುವಾರ ಮತ್ತೊಮ್ಮೆ ವೈದ್ಯಕೀಯ ತಪಾಸಣೆಗೊಳಪಡಿಸಲಾಯಿತು.

ಈ ವೇಳೆ ನಟಿ ಸಂಜನಾ ಗಲ್ರಾನಿ ವೈದ್ಯಕೀಯ ಪರೀಕ್ಷೆಗೆ ನಿರಾಕರಿಸಿದ್ದು, ಪೊಲೀಸರ ವಿರುದ್ಧವೇ ಹರಿಹಾಯ್ದು ಹೈಡ್ರಾಮಾವೇ ಸೃಷ್ಟಿಸಿದ ಪ್ರಸಂಗ ನಡೆಯಿತು.

ನಟಿ ರಾಗಿಣಿ, ಸಂಜನಾ ಗಲ್ರಾನಿ, ಸೆನಗಲ್‌ನ ಲೂಮ್ ಪೆಪ್ಪರ್ ಸಾಂಬಾ, ರಾಹುಲ್ ಟೋನ್ಸಿ, ನಿಯಾಜ್ ಮೊಹಮ್ಮದ್‌ರನ್ನು ವೈದ್ಯಕೀಯ ಪರೀಕ್ಷೆಗಾಗಿ ಕೆ.ಸಿ.ಜನರಲ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ನಟಿ ರಾಗಿಣಿ ಹಾಗೂ ಇತರೆ ಆರೋಪಿಗಳು ವೈದ್ಯಕೀಯ ಪರೀಕ್ಷೆಗೆ ಸಹಕಾರ ನೀಡಿದರೆ, ಸಂಜನಾ ಗಲ್ರಾನಿ ಪೊಲೀಸರ ವಿರುದ್ಧವೇ ಹರಿಹಾಯ್ದರು.



'ನನಗೆ ಪೊಲೀಸರ ಮೇಲಿನ ಭರವಸೆ ಹೋಗುತ್ತಿದೆ. ನನ್ನನ್ನು ಯಾಕೆ ಬಂಧಿಸಿದ್ದೀರಾ ಎಂದು ಗೊತ್ತಿಲ್ಲ, ನನಗ್ಯಾಕೆ ಕರೆದುಕೊಂಡು ಬಂದಿದ್ದೀರಾ? ನನಗೆ ಪರೀಕ್ಷೆ ಮಾಡಿಸಿಕೊಳ್ಳಲು ಯಾರು ಒತ್ತಾಯ ಮಾಡುವಂತಿಲ್ಲ, ನನಗೆ ಇಲ್ಲಿ ಬಕ್ರಾ ಮಾಡಿ ಕರೆತಂದಿದ್ದಾರೆ. ನನ್ನ ವಿರುದ್ಧ ಯಾವ ಸಾಕ್ಷ್ಯ ಇಲ್ಲ, ನಾನು ಯಾರಿಗೋ ಫೋನ್ ಮಾಡಿದ್ರೆ ಅವರು ಮತ್ತೆ ಯಾರಿಗೋ ಕಾಲ್ ಮಾಡಿದ್ರೆ ಅದಕ್ಕೆ ನಾನು ಏನ್ ಮಾಡ್ಲಿ? ಇದು ನನ್ನ ಮೂಲಭೂತ ಹಕ್ಕು ಯಾರು ಒತ್ತಾಯ ಮಾಡುವಂತಿಲ್ಲ, ಇಲ್ಲಿಗೆ ಯಾಕೆ ಕರೆದುಕೊಂಡು ಬಂದಿದ್ದಿರಾ?' ಎಂದು ಕೂಗಾಡಿದ್ದಾರೆ.

ಆಗ ಇನ್‌ಸ್ಪೆಕ್ಟರ್ ಪುನೀತ್, ಇದೊಂದು ಕಾನೂನು ಪ್ರಕ್ರಿಯೆ ದಯವಿಟ್ಟು ಸಹಕಾರ ನೀಡಬೇಕೆಂದು ಮನವಿ ಮಾಡಿದ್ದಾರೆ. ಆದರೂ ನಟಿ ಸ್ಪಂದಿಸಿಲ್ಲ, ಬಳಿಕ ಪುನೀತ್, ಸಂಜನಾ ಗಲ್ರಾನಿ ಪರ ವಕೀಲರಿಗೆ ಕರೆ ಮಾಡಿ ಕಾನೂನು ಪ್ರಕ್ರಿಯೆ ಬಗ್ಗೆ ತಿಳಿಸಿ, ಪರೀಕ್ಷೆಗೆ ಸಹಕಾರ ನೀಡುವಂತೆ ಸೂಚಿಸಿ ಎಂದು ಫೋನ್ ಕೊಟ್ಟಾಗ, ಸಂಜನಾ ಗಲ್ರಾನಿ ಸಹಕಾರ ನೀಡಿದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

**ಡೋಪಿಂಗ್ ಟೆಸ್ಟ್:** ರಾಗಿಣಿ, ಸಂಜನಾ ಗಲ್ರಾನಿ, ರಾಹುಲ್ ಟೋನ್ಸಿ, ನಿಯಾಜ್ ಮೊಹಮ್ಮದ್, ಲೂಮ್ ಪೆಪ್ಪರ್ ಸಾಂಬಾ ಅವರು ಮಾದಕ ವ್ಯಸನಿಗಳು ಎಂದು ತನಿಖೆಯಲ್ಲಿ ಪತ್ತೆಯಾಗಿತ್ತು. ಆದರೆ, ಆರೋಪಿಗಳು ನಾವು ಡ್ರಗ್ಸ್ ಸೇವನೆ ಮಾಡುತ್ತಿರಲಿಲ್ಲ ಎಂದು ಹೇಳುತ್ತಿದ್ದಾರೆ. ಹೀಗಾಗಿ ಗುರುವಾರ ಎಲ್ಲಾ ಆರೋಪಿಗಳ ಮೂತ್ರ, ರಕ್ತ ಮತ್ತು ಕೂದಲು ಪಡೆದುಕೊಳ್ಳಲಾಗಿದೆ. ಸಾಮಾನ್ಯವಾಗಿ ರಕ್ತ ಮತ್ತು ಮೂತ್ರದಲ್ಲಿ ಮಾದಕ ವಸ್ತು ಸೇವನೆ ಪ್ರಮಾಣ ಕೆಲವೇ ದಿನಗಳು ಮಾತ್ರ ಇರುತ್ತದೆ. ಆದರೆ, ಕೂದಲಿನಲ್ಲಿ ಮೂರು ತಿಂಗಳ ಹಿಂದೆ ಡ್ರಗ್ಸ್ ಸೇವಿಸಿದರೂ ಪತ್ತೆ ಹಚ್ಚಬಹುದು ಎಂದು ಪೊಲೀಸರು ಹೇಳಿದರು.

### ಕೊಲಂಬೋಗೆ ಹೋಗಿರಲಿಲ್ಲ: ಜಮೀರ್

ಬೆಂಗಳೂರು: ಸಂಜನಾ ಗಲ್ರಾನಿ ಜತೆ ನಾನು ಕೊಲಂಬೋಗೆ ತೆರಳಿದ್ದೆ ಎಂಬ ಆರೋಪದ ಬಗ್ಗೆ ಯಾವುದೇ ತನಿಖೆಗೂ ನಾನು ಸಿದ್ಧ ಎಂದು ಮಾಜಿ ಸಚಿವ ಜಮೀರ್ ಅಹಮದ್ ಹೇಳಿದ್ದಾರೆ. ಸುದ್ದಿಗಾರರ ಜತೆ ಮಾತನಾಡಿ, ರಾಜ್ಯದಲ್ಲಿ ಬಿಜೆಪಿಯದೇ ಸರ್ಕಾರ ಇದೆ. ವಿಮಾನ ಪ್ರಯಾಣದ ಮಾಹಿತಿ ಪಡೆಯಲಿ. ನನ್ನ ಮೇಲಿನ ಆರೋಪ ಸಾಬೀತಾದರೆ ನನ್ನ ಆಸ್ತಿ ಸರ್ಕಾರಕ್ಕೆ ಬರೆದುಕೊಡುತ್ತೇನೆ. ಇಲ್ಲದಿದ್ದರೆ ಪ್ರಶಾಂತ ಸಂಬರಗಿ ವಿರುದ್ಧ ಯಾವ ಕ್ರಮ ಕೈಗೊಳ್ಳುತ್ತೀರಿ ಎಂದು ಬಿಜೆಪಿ ನಾಯಕರಿಗೆ ಸವಾಲು ಹಾಕಿದ್ದಾರೆ. ವಿನಾಕಾರಣ ನನ್ನ ಮೇಲೆ ಆರೋಪ ಮಾಡಲಾಗುತ್ತಿದೆ ಎಂದು ದೂರಿದರು.

### ಲ್ಯಾಬ್‌ನಲ್ಲಿ ವಿಚಾರಣೆ

ಆಸ್ಪತ್ರೆಯಲ್ಲಿ ಪರೀಕ್ಷೆ ನಡೆಸಿದ ಬಳಿಕ, ಮಡಿವಾಳದಲ್ಲಿರುವ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ರಾಗಿಣಿ ಮತ್ತು ಸಂಜನಾ ವಿಚಾರಣೆ ನಡೆಸಲಾಯಿತು. ಇನ್‌ಸ್ಪೆಕ್ಟರ್ ಅಂಜುಮಾಲಾ ನಾಯಕ್ ಮತ್ತು ಕಾತ್ಯಾಯಿನಿ ಅವರಿಂದ ಆರೋಪಿಗಳನ್ನು ರಾತ್ರಿ ಏಳು ಗಂಟೆವರೆಗೂ ವಿಚಾರಣೆ ನಡೆಸಲಾಯಿತು. ಅನಂತರ ಮಹಿಳಾ ಸಾಂತ್ವನ ಕೇಂದ್ರಕ್ಕೆ ಕಳುಹಿಸಲಾಯಿತು ಎಂದು ಸಿಸಿಬಿ ತಿಳಿಸಿದೆ.

### ಫ್ಲ್ಯಾಟ್‌ನಲ್ಲಿತ್ತು 90 ಕೆ.ಜಿ ಗಾಂಜಾ



ಅಜಮ್ ಪಾಷಾ



ಅಬ್ಬಾಸ್



ಮಸ್ತಾನ್ ವಲಿ

ಬೆಂಗಳೂರು: ಗಾಂಜಾ ಸಂಗ್ರಹಿಸಿದ್ದ ಅಪಾರ್ಟ್‌ಮೆಂಟ್‌ವೊಂದರ ಫ್ಲ್ಯಾಟ್ ನಲ್ಲಿ ದಾಳಿ ನಡೆಸಿರುವ ಸಿಸಿಬಿ ಪೊಲೀಸರು ಲಕ್ಷಾಂತರ ರೂ. ಮೌಲ್ಯದ ಗಾಂಜಾ ವಶಕ್ಕೆ ಪಡೆದು ಆರೋಪಿಗಳನ್ನು ಬಂಧಿಸಿದ್ದಾರೆ. ಕಾಡುಗೋಡಿಯ ಅಜಾಮ್ ಪಾಷಾ, ಮಸ್ತಾನ್ ವಾಲಿ, ಹೊಸ ಕೋಟೆಯ ಮೊಹಮದ್ ಅಬ್ಬಾಸ್ ಬಂಧಿತರು. ಆರೋಪಿಗಳಿಂದ 50 ಲಕ್ಷ ರೂ. ಮೌಲ್ಯದ 90 ಕೆ.ಜಿ ಗಾಂಜಾ, ಒಂದು ಇನೋವಾ ಕಾರು, ಮೂರು ಮೊಬೈಲ್ ಜಪ್ತಿ ಮಾಡಿಕೊಂಡಿರುವ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಕಾಡುಗೋಡಿಯ ದೊಡ್ಡಬನಹಳ್ಳಿಯ ಅಪಾರ್ಟ್‌ಮೆಂಟ್‌ವೊಂದರ 13ನೇ ಮಹಡಿಯ ಫ್ಲ್ಯಾಟ್‌ನಲ್ಲಿ ವಾಸವಿದ್ದ ಅಜಾಮ್ ಪಾಷಾ ತನ್ನ ಸಹಚರರ ಜತೆ ಭಾರೀ ಪ್ರಮಾಣದ ಗಾಂಜಾ ಸಂಗ್ರಹಿಸಿ ಮಾರಾಟ ಮಾಡುತ್ತಿದ್ದ. ಈ ಬಗ್ಗೆ ಖಚಿತ ಮಾಹಿತಿ ಆಧರಿಸಿ ಸಿಸಿಬಿ ದಾಳಿ ನಡೆಸಿದೆ. ಆರೋಪಿಗಳ ಜತೆ ದಂಧೆಯಲ್ಲಿ ತೊಡಗಿದ್ದ ಎಚ್ ಎಲ್ ಪಪ್ಪು ಎಂಬಾತ ತಲೆಮರೆಸಿಕೊಂಡಿದ್ದು, ಆತನ ಬಂಧನಕ್ಕೆ ಕ್ರಮ ವಹಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಆರೋಪಿಗಳು ಆಂಧ್ರಪ್ರದೇಶದ ವಿಶಾಖಪಟ್ಟಣಂ ನಲ್ಲಿ ಅಲ್ಲಿನ ಪೆಡ್ಲರ್ ಪ್ರವೀಣ್ ಮುಖಾಂತರ ಭಾರೀ ಪ್ರಮಾಣದ ಗಾಂಜಾ ಖರೀದಿಸುತ್ತಿದ್ದರು. ಕ್ಯಾಂಟರ್‌ಗಳ ಮೂಲಕ ನಗರಕ್ಕೆ ತಂದು ಫ್ಲ್ಯಾಟ್‌ನಲ್ಲಿ ಸಂಗ್ರಹಿಸಿ ರಾಜ್ಯದ ವಿವಿಧ ಕಾಲೇಜು ವಿದ್ಯಾರ್ಥಿಗಳಿಗೆ ಮಾರಾಟ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದರು.